C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆ:101/2023 C/w 113/2023**

ಪ್ರಾಸಾ. **21** ಚಾಸಾ. **38**

| | |
|---|---|
| ಸಾಕ್ಷಿದಾರರ ಹೆಸರು | ಚಂದ್ರಶೇಖರ ಕೆ |
| ತಂದೆಯ ಹೆಸರು | ನಿಂಗೇಗೌಡ ಉ: ತಮ್ಮೇಗೌಡ |
| ವಯಸ್ಸು | **39** ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಕುರಿಕೆಂಪನದೊಡ್ಡಿ |

**ಸಾಕ್ಷಿಯನ್ನು ದಿನಾಂಕ:30.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯನ್ನು ಈ ಹಿಂದೆ ನಾನು ನೋಡಿರುವುದಿಲ್ಲ. ಸಾಕ್ಷಿಗೆ ಈಗ ತೋರಿಸಿದಂತಹ ಒಂದು ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿಪಿ-40 ಎಂದು, ಸಾಕ್ಷಿಯ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು.

2. ಅದೇ ರೀತಿ ಇನ್ನೊಂದು ದಾಖಲೆಯನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿ ಸದರಿ ದಾಖಲೆಯಲ್ಲೂ ಸಹ ನನ ಸಹಿ ಇರುತ್ತದೆ ಎಂದು ಗುರುತಿಸಿರುತ್ತಾರೆ. ಸದರಿ ದಾಖಲೆ ಮಹಜರ್ ಆಗಿದ್ದು, ಸದರಿ ಮಹಜರನ್ನು ನಿಪಿ-41 ಎಂದು, ಮತ್ತು ಸಾಕ್ಷಿಯ ಸಹಿಯನ್ನು ನಿಪಿ-41(ಎ) ಎಂದು ಗುರುತಿಸಲಾಯಿತು. ಚಾಸಾ-32 ಗೊತ್ತಿಲ್ಲ.

**3.** ಸುಮಾರು ಒಂದೂವರೆ ವರ್ಷಗಳ ಹಿಂದೆ ನಾನು ನನ್ನ ರೈಫಲ್ ರಿನಿವಲ್ ಮಾಡಿಸಿಕೊಳ್ಳಲು ಕೆ.ಎಂ. ದೊಡ್ಡಿ ಪೊಲಿಸ್ ಠಾಣೆಗೆ ಹೋದಾಗ ಸದರಿ ದಾಖಲೆಗಳಿಗೆ ಸಹಿ ಮಾಡಿಸಿಕೊಂಡಿರುತ್ತಾರೆ. ನಾನು ಸಹಿ ಮಾಡುವಾಗ 1 ನೇ ಆರೋಪಿ ಇರಲಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

**4.** ಈ ಹಂತದಲ್ಲಿ ಸಾಕ್ಷಿಗೆ ಒಂದು ಲಕೋಟೆಯಲ್ಲಿ ಸೀಲ್ ಮಾಡಿ ಇಟ್ಟಿದ್ದಂತಹ ಮೆಮೋರಿ ಕಾರ್ಡನ್ನು ನ್ಯಾಯಾಲಯದ ಅನುಮತಿ ಮೇರೆಗೆ ತೆಗೆದು ತೋರಿಸಲಾಗಿ ಸಾಕ್ಷಿ ಅ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಮುಂದೆ ಯಾವುದೇ ವಾಯ್ಸ್ ಸ್ಯಾಂಪಲ್ ಪಡೆದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಹಿ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಪಡೆದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ26.12.2022 ರಂದು ಪೊಲೀಸರು ನನಗೆ ಪ್ರಕರಣಕ್ಕೆ ಸಂಬಂಧಪಟ್ಟಂತೆ 1 ನೇ ಆರೋಪಿಯಾದ ದೊಡ್ಡಯ್ಯರವರ ವಾಯ್ಸ್ ಸ್ಯಾಂಪಲ್ ತೆಗೆದುಕೊಳ್ಳಬೇಕು ಮತ್ತು ಮಹಜರ್ ಮಾಡಬೇಕು ಎಂದು ಆ ಸಮಯದಲ್ಲಿ ಹಾಜರಿರಬೇಕೆಂದು ನಿಪಿ-40 ರಂತೆ ನೋಟೀಸ್ ನೀಡಿದಾಗ ನಾನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**2.** ನಂತರ ಪೊಲೀಸ್ ಠಾಣೆಯಲ್ಲಿ ಮಧ್ಯಾಹ್ನ 12.30 ಸಮಯದಲ್ಲಿ 1 ನೇ ಆರೋಪಿ ಇದ್ದು, ಸಿ.ಡಬ್ಲ್ಯು-49 ರವರು ಓಪೋ ಎ 1 ಕೆ ಮೊಬೈಲಿಗೆ ಈಗ ತೋರಿಸಿದ 8 ಜಿಬಿ ಮೆಮೋರಿ ಕಾರ್ಡನ್ನು ಅಳವಡಿಸಿ, ನಂತರ 1 ನೇ ಆರೋಪಿಯಾದ ವಾಯ್ಸ್ ರೆಕಾರ್ಡಿಂಗ್

ಪಡೆಯಲಾಯಿತು. ಆತನ ಧ್ವನಿಯನ್ನು ಮೂರು ಸುತ್ತಿನಲ್ಲಿ ಕನ್ನಡ ಸಂಭಾಷಣೆಯಲ್ಲಿ ನನ್ನ ಸಮಕ್ಷಮ ಪಡೆಯಲಾಯಿತು ಎಂದರೆ ಸರಿಯಲ್ಲ. ಈಗ ತೋರಿಸಿದಂತಹ 8 ಜಿಬಿ ಮೆಮೋರಿ ಕಾರ್ಡಿ ನಲ್ಲಿ 1 ನೇ ಆರೋಪಿಯ ವಾಯ್ಸನ್ನು ರೆಕಾರ್ಡ್ ಮಾಡಲಾಯಿತು. ನತಂರ ಸದರಿ ಕಾರ್ಡನ್ನು ನಮ್ಮ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಹಾಕಿ ಮೊಹರು ಮಾಡಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-32 ರವರೂ ಸಹ ಹಾಜರಿದ್ದು, ಸಹಿ ಮಾಡಿದರು ಎಂದರೆ ಸರಿಯಲ್ಲ.

3. ಮಧ್ಯಾಹ್ನ 12.30 ರಿಂದ 1.30 ರವರೆಗೆ ನಮ್ಮ ಸಮಕ್ಷಮ ಕಂಪ್ಯೂಟರ್ ನಲ್ಲಿ ಪ್ರಿಂಟ್ ತೆಗೆಯಲಾಯಿತು ಎಂರೆ ಸರಿಯಲ್ಲ. ನಾವು ಸದರಿ ಮಹಜರಿನಲ್ಲಿ ಬರೆದಿರುವ ವಿಚಾರವನ್ನು ತಿಳಿದು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೆಮೋರಿ ಕಾರ್ಡನ್ನು ನಿಪಿ-42 ಎಂದು ಗುರುತಿಸಲಾಯಿತು. ನಿಪಿ-42 ರಲ್ಲಿ 1 ನೇ ಆರೋಪಿಯ ಮಾದರಿ ವಾಯ್ಸ್ ಸಂಗ್ರಹಿಸಿರುವುದು ಗೊತ್ತಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.